**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ**

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು – 1**

ಸಂಖ್ಯೆ:ಸಿ5(4) ಇಪಿಎಬಿಎಕ್ಸ್ ನಿರ್ವಹಣೆ 134/2012–13 ದಿನಾಂಕ:02–04–2013

**ಪ್ರಕಟಣೆ**

**ಆಂತರಿಕ ದೂರವಾಣಿ ಜಾಲ ವಾರ್ಷಿಕ ನಿರ್ವಹಣೆಗೆ ದರಪಟ್ಟಿ ಆಹ್ವಾನ**

ವಿಷಯ: ಕಛೇರಿಯಲ್ಲಿ ಅಳವಡಿಸಿರುವ ಆಂತರಿಕ ದೂರವಾಣಿ ಜಾಲದ ವಾರ್ಷಿಕ ನಿರ್ವಹಣೆಗೆ ದರಪಟ್ಟಿ ಸಲ್ಲಿಸುವ ಬಗ್ಗೆ.

ಕಛೇರಿಯಲ್ಲಿ ಅಳವಡಿಸಿರುವ ಆಂತರಿಕ ದೂರವಾಣಿ ಜಾಲದಲ್ಲಿ ಕಾರ್ಯ ನಿರ್ವಹಿಸುತ್ತಿರುವ, 69 ಆಂತರಿಕ ದೂರವಾಣಿ ಲೈನ್‌ಗಳನ್ನು ವಾರ್ಷಿಕ ನಿರ್ವಹಣೆಗೆ ಒಳಪಡಿಸಲು ತೀರ್ಮಾನಿಸಲಾಗಿದೆ. ಈ ಕಾರ್ಯಕ್ಕೆ ಎಲ್ಲಾ ತೆರಿಗೆಗಳೂ ಸೇರಿದಂತೆ ನಿಮ್ಮ ಸಂಸ್ಥೆಯಿಂದ ಸ್ಪರ್ಧಾತ್ಮಕ ದರವನ್ನು ನಮೂದಿಸಿ ಸೀಲ್ ಮಾಡಿದ ಲಕೋಟೆಯನ್ನು ದಿನಾಂಕ: 18–4–2013ರ ಸಂಜೆ 5.00 ಘಂಟೆ ಒಳಗಾಗಿ ಕೆಳಗೆ ಸಹಿ ಮಾಡಿರುವವರ ಹೆಸರಿನ ವಿಳಾಸಕ್ಕೆ ಕಳುಹಿಸುವುದು. ದಿನಾಂಕ ಮುಗಿದ ನಂತರ ಬರುವ ದರಪಟ್ಟಿ ಲಕೋಟೆಗಳನ್ನು ಸ್ವೀಕರಿಸಲಾಗುವುದಿಲ್ಲ. ದರ ಪಟ್ಟಿಯು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ.

ಷರತ್ತುಗಳು:–

1. ಸೇವಾ ನಿರ್ವಹಣೆಯ ಕರಾರು ಒಂದು ವರ್ಷದ ಅವಧಿಯದಾಗಿರುತ್ತದೆ.
2. ಈ ಅವಧಿಯಲ್ಲಿ ಯಂತ್ರ ಯಾವ ಯಾವ ಬಿಡಿ ಭಾಗಗಳ ನಿರ್ವಹಣೆಯಲ್ಲಿ ಸೇರಿರುವ ಹಾಗೂ ಎ.ಎಂ.ಸಿಯಲ್ಲಿ ಸೇರಿಲ್ಲದೆ ಇರುವ ಬಿಡಿ ಭಾಗಗಳ ಬಗ್ಗೆ ಪ್ರತ್ಯೇಕವಾಗಿ ನಮೂದಿಸಬೇಕು.
3. ಯಂತ್ರದ ದುರಸ್ಥಿ ಸಂದರ್ಭದಲ್ಲಿ ಈ ಕಛೇರಿಯಿಂದ ದೂರವಾಣಿ ಕರೆ ಸ್ವೀಕರಿಸಿದ 2 ದಿನಗಳ ಒಳಗಾಗಿ ಬಂದು ದುರಸ್ಥಿ ಮಾಡಬೇಕು.
4. ವಾರ್ಷಿಕ ನಿರ್ವಹಣೆಯ ಒಟ್ಟು ದರವನ್ನು ಶೇ 25 ರಂತೆ ತ್ರೈಮಾಸಿಕವಾಗಿ, ಮೊತ್ತವನ್ನು ಪಾವತಿಸಲಾಗುವುದು. ಈ ಅವಧಿಯಲ್ಲಿ ಸಂಸ್ಥೆಯಿಂದ ನೀಡುವ ಸೇವೆಯು ತೃಪ್ತಿಕರವಾಗಿರಬೇಕು.
5. ಸೇವೆಯು ತೃಪ್ತಿಕರವಾಗಿರದಿದ್ದ ಪಕ್ಷದಲ್ಲಿ ವಾರ್ಷಿಕ ಸೇವಾ ನಿರ್ವಹಣೆ ಆದೇಶವನ್ನು ರದ್ದುಪಡಿಸುವ ಅಧಿಕಾರ ಇಲಾಖೆಯದಾಗಿರುತ್ತದೆ.
6. ನೀವು ನೀಡುವ ದರದಲ್ಲಿ ಎಲ್ಲಾ ಸೇವಾ ಕರಗಳು ಮತ್ತು ತೆರಿಗೆಗಳು ಒಳಗೊಂಡಿರಬೇಕು.
7. ಸೇವಾ ನಿರ್ವಹಣೆಯನ್ನು ಸಕಾಲದಲ್ಲಿ ನಿರ್ವಹಿಸದಿದ್ದಲ್ಲಿ ಎ.ಎಂ.ಸಿಯ ಮೊತ್ತಕ್ಕೆ ಶೇ: 2ರಷ್ಟು ಸಂಸ್ಥೆಯಿಂದ ದಂಡ ರೂಪದಲ್ಲಿ ವಸೂಲು ಮಾಡಲಾಗುವುದು.

ತಮ್ಮ ನಂಬುಗೆಯ,

[ಕೆ.ಪಿ.ಹನುಮಂತರಾಯಪ್ಪ]
ಅಪರ ಆಯುಕ್ತರು [ಆಡಳಿತ] [ಹೆ.ಪ್ರ]

E:\c5(4).doc